ಬರೆದು ಬಿಟ್ರು ಅವರು. ನನಗೆ ಗೊತ್ತಿಲ್ಲದೆ ಬರೆದಿದ್ದು. ಸ್ವಲ್ಪ ಕಿರಿಕಿರಿ ಆಯ್ತು, ಮತ್ತೆ ಸರಿಯಾಯ್ತು. ಏನಾಗ್ಲಿಲ್ಲ. ಈಗ ಆ ಪುಸ್ತಕ ರೀಪ್ರಿಂಟ್ ಆಗ್ತಾ ಇದೆ. ಬಹಳ ವರ್ಷಗಳ ನಂತರ. ಎಷ್ಟೋ ಮಂದಿ ಬೆಂಗಳೂರಿನವರು ಇಲ್ಲಿ ಬಂದು ಆ ಪುಸ್ತಕವನ್ನು ಝೆರಾಕ್ಸ್ ಮಾಡಿಕೊಂಡು ಹೋಗಿದ್ದಾರೆ. ಅವ್ರು ಈಗ್ಲೂ ಹೇಳ್ತಾರೆ, ನೀವು ಆವತ್ತು ಬರೆದಿದ್ದಲ್ವ, ಇವತ್ತೂ ಹಾಗೇ ಆಗ್ತಾ ಉಂಟು. ಮೊನ್ನೆ ಯಾರೋ ಒಬ್ರು ಸತ್ತಾಗ ಜನಗಳೆಲ್ಲ ಸುಮ್ನೆ ಹೋಗ್ತಾ ಇದ್ರು... ಕಾದಂಬರಿಯಲ್ಲಿ ಅಂಥದ್ದೇ ಒಂದು ಘಟನೆ ಬರ್ತದೆ.

**I was not competing with anybody.** ಯಾವುದೇ ಒಂದು ಬಂಡಾಯ ಇತ್ಯಾದಿಗಳಲ್ಲಿ ನಾನು ಗುರುತಿಸಿಕೊಳ್ಳಲಿಲ್ಲ. ಯಾವುದೇ ರಾಜಕೀಯ ಪಕ್ಷದ ಪರವಾಗಲಿ ವಿರೋಧವಾಗಲಿ ಹೋಗಲಿಲ್ಲ. ನನಗೆ ಮನುಷ್ಯ ಮಾತ್ರ ಕಾಣುವುದು. ವ್ಯಕ್ತಿಯನ್ನು ವ್ಯಕ್ತಿಯಾಗಿಯೇ ನೋಡ್ತೇನೆ ನಾನು. ನಾನು ಮನುಷ್ಯನ ಒಳಹೊಕ್ಕು ನೋಡ್ತೇನೆ. ಹೊರಗಿನ ವಿವರ ನೋಡುವುದಿಲ್ಲ. ಒಳಗೆ ಹೋಗಿ ನೋಡ್ತೇನೆ. ಆಗ ನಿಮಗೆ ನಿಜವಾದ ವ್ಯಕ್ತಿ ಕಾಣ್ತಾನೆ. ಅವನ ಹೆಸರು, ಪಕ್ಷ, ಧರ್ಮ, ಮತ ಯಾವುದೂ ಕಾಣುವುದಿಲ್ಲ. ಲೇಖಕ ಹೀಗಿರಬೇಕು ಅಂತ ನನ್ನ ಭಾವನೆ. ಹಾಗೆಯೇ ಇದ್ದೇನೆ. ಕೀರ್ತಿ ಅಥವಾ ಹೆಸರು ಕೂಡ ನನ್ನ ನಾಲಗೆಯಲ್ಲಿ ಇಲ್ಲ. ಅದು ಆಡುವವರ ಮಾತಿನಲ್ಲಿದೆ. ಅದನ್ನ ನಾನು ಹಚ್ಚಿಕೊಳ್ಳಬೇಕೆಂದೇನಿಲ್ಲ. ಬುದ್ಧನ ಹಾಗೆ. ಸ್ವೀಕರಿಸಬೇಕಂತಿಲ್ಲ. ವಿಮರ್ಶೆ ಮಾಡಿ, ಮಾಡದಿರಿ, ಬ್ರಾಹ್ಮಣ ವಿರೋಧಿ ಅಂತ ಬಹಳ ಜನ ಹೇಳ್ತಾರೆ. ನನ್ನ ಕೇಳಿದರೆ ಬ್ರಾಹ್ಮಣ ಅಂದ್ರೆ ಏನು, ಬ್ರಾಹ್ಮಣ್ಯ ಅಂದ್ರೇನು ಎಲ್ಲ ನಾವು ಮಾತನಾಡುವ. ಅದನ್ನು ಒಪ್ಪಿ ಅಥವಾ ಬಿಡಿ, ಅದು ನಿಮಗೆ ಸೇರಿದ್ದು.

## ಖ್ಯಾತಿ, ಜನಪ್ರಿಯತೆಯ ಬಗ್ಗೆ

ನಾನು ಕೆಲವೊಂದು ಶಬ್ದಗಳನ್ನು ಬಳಸುವುದೇ ಇಲ್ಲ. ಉದಾಹರಣೆಗೆ ಸಾಧನೆ ಎಂಬ ಶಬ್ದವನ್ನು ನಾನು ಬಳಸುವುದೇ ಇಲ್ಲ. ಯಾರದ್ದೂ ಕೂಡ ಸಾಧನೆ ಅಲ್ಲ ಅಂತ ಹೇಳುವುದು ನಾನು. ಸಾಧನೆ ಅನ್ನುವುದು ಒಂದು ಇಲ್ಲ ಎನ್ನುವ ಅರ್ಥದಲ್ಲಿ. ಅದು ಮಾತ್ರ ಅಲ್ಲ, ಕೀರ್ತಿ ಅಂತನ್ನುವುದು ಒಂದು ಇಲ್ಲ ಅಂತ ಹೇಳ್ತೇನೆ ನಾನು. ಏನಿಲ್ಲ. ಕೀರ್ತಿ ಅನ್ನುವಂಥದ್ದು ಏನದು? ಎನಲೈಸಿಸ್ ಮಾಡ್ಲಿಕ್ಕೆ ಹೋದ್ರೆ, ಎಲ್ಲಿ ಅದು ಇರುವುದು? ಹೇಳುವವನ ನಾಲಗೆಯಲ್ಲಿ, ಬರೆಯುವವನ ಬರಹದಲ್ಲಿ. ಅವನ. ಅವನ ಅಷ್ಟೆ. ಜೀವನದಲ್ಲಿ ಏನಿದೆ? ಬೈರನ್ ಹೇಳ್ತಾನೆ, ನೆರೆತ ಕೂದಲ ಮೇಲೆ ಮಲ್ಲಿಗೆಯ ಹೂ ದಂಡೆ ಅಂತ. ಇಂಗ್ಲಿಷ್ ಮಾತು ನೆನಪಾಗ್ತಾ ಇಲ್ಲ. ಹಾಗೆಯೇ ಬಹಳ ನಿರ್ವಿಕಾರವಾಗಿ, ಒಂದು ರೀತಿಯ ವಿರಕ್ತಿಯಿಂದ. ಸಾಧನೆ ಅಂತ ಹೇಳುವಂತಾದ್ದು, ನಿಜವಾಗಿ ನಾನು ಸಾಧಿಸಿದೆ ಎಂಬ ಸಿಕ್ಕಾಪಟ್ಟೆ ಅಹಂನ ಮಾತದು. ನನ್ನ ಸಾಧನೆ. ನಿಮ್ಮ ಸಾಧನೆ ಏನಂತ ಕೇಳಿದ್ರೆ ಏನಿಲ್ಲ. ನಾನು ಬರೀತೇನೆ. ಬದುಕಿದ್ದೇನೆ. ಪ್ರಶಸ್ತಿ ಬಂದರೆ ಬರ್ತದೆ. ಬರಲಿಲ್ಲವಾ ಬಂದಿಲ್ಲ ಅಂತೇನೆ. ಅರ್ಜಿ ಹಾಕಿದ್ದೀರಾ? ಅರ್ಜಿ ಗಿರ್ಜಿ ಏನು ಹಾಕಿಲ್ಲ, ನನಗೆ ಆಸಕ್ತಿಯಿಲ್ಲ. ಪ್ರಶಸ್ತಿಯಿಂದ ಸಿಗುವ ಹಣ ನನಗೆ ಸ್ವಲ್ಪ ದಿನ ಬರಬಹುದು. ಅದರಿಂದೇನು ನನ್ನ ಬದುಕು ನಡೆಯುವುದಿಲ್ಲ. ಇನ್ನು ಹೆಸರು. ಗಟ್ಟಿಯವರು ಕೂಡ ಏನೊ ಲಾಬಿ ಮಾಡಿದಾರೆ ಅಂತ ಹೇಳಬಹುದು. ಅದು ಹೇಳಿದ್ರು ಅಂತ ಕೂಡ ಏನು ಬೇಸರ ಇಲ್ಲ. ಯಾಕಂದ್ರೆ ಲೋಕ ಇರುವುದೇ ಹಾಗೆ! ಲೋಕದ ರೀತಿನೀತಿ ನಿಮಗೆ ಸಂಪೂರ್ಣ ಅರ್ಥ ಆದ ಮೇಲೆ ಆ ಕಾರಣಕ್ಕೇ ನಿಮಗೆ ದುಃಖ ಪಡ್ಲಿಕ್ಕೆ ಅಥವಾ ಸಂತೋಷ ಪಡ್ಲಿಕ್ಕೆ ಏನಿಲ್ಲ. ನಿಮ್ಮ ಸಂತೋಷವೇನಿದ್ರೂ ಅದು